ದಿನಾಂಕಃ **17.12.2025** ರಂದು ಆದ ಆದೇಶದ ಮೇರೆಗೆ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

---

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರಃಶ್ರೀ ಪಿ.ಜೆ.ಆರ್. ವಕೀಲರಿಂದಃ–**

1. ಈ ಪಿರ್ಯಾದನ್ನು ದಾಖಲಿಸುವ ಪೂರ್ವದಲ್ಲಿ ಸಂಬಂದ ಪಟ್ಟ ಪೊಲೀಸ್ ಠಾಣೆಗಾಗಲೀ ಅಥವಾ ಎಸ್.ಪಿ ರವರಿಗಾಗಲೀ ದೂರು ಕೊಟ್ಟಿರುವುದಿಲ್ಲ. ನಾನು ಸಂತೋಷ್ ರವರಿಗೆ ಹೇಳಿ ಸಂತೋಷ್ ರವರಿಂದ ಆರೋಪಿತರಿಗೆ ಅದೇ ದಿನ ಹಣ ಕೊಡಿಸಿರುತ್ತೇನೆ. ನಾನು ಸಂತೋಷ್ ರವರ ಸಾಲವನ್ನು ತೀರಿಸುವ ಸಲುವಾಗಿ ರೂ 15 ಲಕ್ಷ ಕೊಟ್ಟಿರುತ್ತೇನೆ. ಸದರಿ ವಿಚಾರವನ್ನು ನಾನು ಪಿರ್ಯಾದನ್ನು ದಾಖಲಿಸುವ ಸಂದರ್ಬದಲ್ಲಿ ನನ್ನ ವಕೀಲರಿಗೆ ತಿಳಿಸಿದ್ದೆ. ನನ್ನ ಪ್ರಕಾರ ಸಂತೋಷ್ ರವರಿಗೆ ಬರಬೇಕಾದ ಹಣ ಸಂದಾಯ ಆಗಿರುತ್ತದೆ. ಸಂತೋಷ್ ರವರು ತನಗೆ ಹಣ ಬರಲು ಬಾಕಿ ಇದೆ ಎಂದು ಯಾವುದೇ ದೂರನ್ನು ಕೊಟ್ಟಿರುವುದಿಲ್ಲ. ಖಾಸಗಿ ಪಿರ್ಯಾದನ್ನಉ ದಾಖಲಿಸುವ 1 ತಿಂಗಳ ಪೂರ್ವದಲ್ಲಿ ವಕೀಲರಿಗೆ ಮಾಹಿತಿ ಕೊಟ್ಟಿದ್ದು ನಂತರ ನಾನು ಖಾಸಗಿ ಪಿರ್ಯಾದನ್ನು ದಾಖಲಿಸುವ ದಿನದಂದೇ ವಕೀಲರ ಕಚೇರಿಗೆ ಹೋಗಿರುತ್ತೇನೆ. ವಶೀಕರಣ ವಿದ್ಯೆ ಎಂದರೆ ಒಬ್ಬರನ್ನು ಹೇಳಿದಂತೆ ಕೇಳಿಸುವುದು ಎಂದರೆ ಸರಿ. ನಾನು ಸುಳ್ಳು ಜಾಹೀರಾತು ಕೊಟ್ಟಿರುವುದಿಲ್ಲ.

2. ನಿ.ಪಿ.7 ವಾದಪತ್ರದಲ್ಲಿ ನಮೂದಿಸಿರುವ ದಿನಾಂಕ 01.02.2013 ರಂದು ಡೆಪಾಸಿಟ್ ಆಫ್ ಟೈಟಲ್ ಡೀಡನ್ನು ವಿಟ್ಲದ ಅಬೂಬಕ್ಕರ್ ವಕೀಲರ ಮೂಲಕ ತಯಾರಿಸಿರುತ್ತೇನೆ. ಸದರಿ ದಾಖಲೆಯನ್ನು ನೊಂದಣಿ ಮಾಡಿಸಿರುವುದಿಲ್ಲ. ನನ್ನ ಪ್ರಕಾರ ಸದರಿ ಸಾಲಕ್ಕೆ ಶೇ.16 ಬಡ್ಡಿ ವಿದಿಸಲಾಗಿತ್ತು. ನನಗೆ ಲೇವಾದೇವಿ ವ್ಯವಹಾರ ಮಾಡಲು ಲೈಸೆನ್ಸ್ ಇರುವುದಿಲ್ಲ. ನಾನು ಕೇರಳದಲ್ಲಿ ದಾಖಲಿಸಿದ್ದ ದಾವೆಯಲ್ಲಿ ಶೇ 15 ಬಡ್ಡಿ ವಿದಿಸಿರುವ ಬಗ್ಗೆ ತಿಳಿಸಿರುತ್ತೇನೆ. ನಿ.ಪಿ.4 ಕರಾರು ಪತ್ರಕ್ಕೆ 1 ನೇ ಆರೋಪಿಯೇ ಸ್ಟಾಂಪ್ ಪೇಪರನ್ನು ಖರೀದಿಸಿದ್ದರು. 1 ನೇ ಆರೋಪಿ ಯಾವುದೇ ಸ್ಟಾಂಪ್ ಪೇಪರನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ

ಸಾಲ ಪಡೆಯುವ ಸಲುವಾಗಿ ಕರಾರು ಮಾಡಿಕೊಳ್ಳಲು ಸಾಲ ಪಡೆಯುವ ವ್ಯಕ್ತಿ ಸ್ಟ್ಯಾಂಪ್ ಪೇಪರನ್ನು ಖರೀದಿಸುತ್ತಾರೆ ಎಂದರೆ ಸರಿ. ನಿ.ಪಿ. 4 ಕರಾರಿನ ಸ್ಟ್ಯಾಂಪ್ ಪೇಪರನ್ನು ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,

ಬಂಟ್ವಾಳ